

ಅಲ್ಲಿಯೇ ತಾಲೀಮು ನಡೆಸುತ್ತಿದ್ದರು. ನಮ್ಮ ಮನೆಯಿಂದ ಸ್ವಲ್ಪ ದೂರ ನಡೆದು ಸಾಗಿದರೆ, ಅವರ ತಾಲೀಮನ್ನೂ ನಾವು ನೋಡಬಹುದಿತ್ತು. ರಾಜ್‌ಕುಮಾರ್ ಅವರನ್ನು ತುಂಬಾ ಹತ್ತಿರದಿಂದ ನಾನು ಅಗಲೇ ಕಣ್ತುಂಬಿಕೊಂಡೆ. ಬಾಲಣ್ಣ (ಬಾಲಕೃಷ್ಣ), ನರಸಿಂಹರಾಜು, ಜಿ.ವಿ. ಅಯ್ಯರ್ ಎಲ್ಲರನ್ನೂ ಗಮನಿಸಿದೆ. ಹೈಸ್ಕೂಲು ಓದುತ್ತಿದ್ದಾಗಲೇ ಇವರನ್ನೆಲ್ಲ ನೋಡಿದ್ದ ನನ್ನೊಳಗೆ ಸಹಜವಾಗಿಯೇ, ನನಗೆ ಅರಿವೇ ಇಲ್ಲದಂತೆ ನಾಟಕದ ಹುಚ್ಚು ಮೂಡಿತ್ತು. ಆದರೆ, ವೇದಿಕೆ ಹತ್ತಲು ನನಗೆ ಈಗಲೂ ಅಳುಕು. ಎಂದಿಗೂ ನಾನು ನಾಟಕದಲ್ಲಿ ಅಭಿನಯಿಸಬೇಕು ಎಂದುಕೊಳ್ಳಲೇಇಲ್ಲ.

ಸಿನಿಮಾ ಟೆಂಟ್‌ನಲ್ಲಿ ನಾಲ್ಕಾಣೆ ಕೊಟ್ಟರೆ ಎರಡಾಣೆಗೆ ಟಿಕೆಟ್ ಕೊಟ್ಟು, ಇನ್ನೆರಡಾಣೆಗೆ ಕಡಲೆಕಾಯಿ ಕೊಡುತ್ತಿದ್ದರು. ನೆಲದ ಮೇಲೆ ಕುಳಿತುಕೊಂಡು ಕಡಲೆಕಾಯಿ ತಿನ್ನುತ್ತಾ ಸಿನಿಮಾ ನೋಡುವುದು ಪರಮಸುಖ. ನಾನು ನೋಡಿದ ಮೊದಲ ಸಿನಿಮಾ 'ಪಾತಾಳ ಭೈರವಿ'. ಅಲ್ಲಿಂದ ಸಿನಿಮಾ ನನಗೆ ಇಷ್ಟವಾದ ಮಾಧ್ಯಮವಾಯಿತು.

ಎಸ್‌ಜೆಪಿಗೆ ಸೇರಿದಾಗ ಮೊದಲಿಗೆ 'ಸೆರಾಮಿಕ್ಸ್' ವಿಷಯವನ್ನು ಕೊಟ್ಟಿದ್ದರು. ಅದು ಬೇಡ, ಸಿನಿಮಾಟೊಗ್ರಫಿ ಕೊಡಿ ಎಂದು ಕೇಳಿಕೊಂಡೆ. ಲಕ್ಷ್ಮೀನಾರಾಯಣ ಎನ್ನುವವರು ಅಲ್ಲಿ ವಿಭಾಗದ ಮುಖ್ಯಸ್ಥರಾಗಿದ್ದರು. ಸಿನಿಮಾಟೊಗ್ರಫಿ ಸೀಟುಗಳೆಲ್ಲ ಭರ್ತಿಯಾಗಿವೆ ಎಂದು ಮೊದಲು ಹೇಳಿದರು. ಆಮೇಲೆ ಯಾರೋ ಒಬ್ಬರು ಬಿಟ್ಟು ಹೋದರು. ಆ ಸೀಟನ್ನು ನನಗೆ ಕೊಟ್ಟರು. ಅಷ್ಟು ಹೊತ್ತಿಗೆ ಅಲ್ಲಿಂದ ಗೋವಿಂದ್ ನಿಹಲಾನಿ, ಕುಣಿಗಲ್ ನಾಗಭೂಷಣ, ಬೆಂಗಳೂರು ನಾಗೇಶ್, ಕಬ್ಬಿಣಕಂತಿ ಅವರೆಲ್ಲ ಪಾಸಾಗಿ ಹೋಗಿದ್ದರು. ನಟ ಶ್ರೀನಾಥ್ ನನಗಿಂತ ಒಂದು ವರ್ಷ ಸೀನಿಯರ್ ಆಗಿದ್ದರು. ಆಮೇಲೆ ನನ್ನ ಸಹಪಾಠಿ ಆದರು. ಅದಾದ ಮೇಲೆ ನನಗೆ ಜೂನಿಯರ್ ಕೂಡ ಆದರು. ನಾನು ಪಾಸಾಗಿ ಮುಂದಕ್ಕೆ ಹೋದೆ. ಅವರು ಅಲ್ಲಿಯೇ ಉಳಿದುಕೊಂಡರು.

ಎಸ್‌ಜೆಪಿಯಲ್ಲಿ ನಮ್ಮದು ಹತ್ತೊಂಬತ್ತು- ಇಪ್ಪತ್ತು ಜನರ ಗುಂಪು. ಒಂದೋ, ಎರಡೋ ಕೂಪನ್ ಪಡೆದು ಹೋಟೆಲ್‌ನಲ್ಲಿ ಎಂಟು–ಹತ್ತು ಜನರು ತಿಂಡಿ ತಿಂದು, ತಮಾಷೆ ಮಾಡುತ್ತಿದ್ದೆವು. ಆಮೇಲೆ ಹೋಟೆಲ್‌ನವರಿಗೆ ಎಲ್ಲರ ತಿಂಡಿಯ ಹಣ ಕೊಟ್ಟು ಬರುತ್ತಿದ್ದೆವು.

ಲಕ್ಷ್ಮೀನಾರಾಯಣ, ಬಿ. ಮರಳಪ್ಪ, ಅಶ್ವತ್ಥ ನಾರಾಯಣ ಶೆಟ್ಟಿ ನಮಗೆ ಅಲ್ಲಿ ಪಾಠ ಕಲಿಸುತ್ತಿದ್ದರು. ಲಕ್ಷ್ಮೀನಾರಾಯಣ ಹಾಗೂ ಮರಳಪ್ಪ ಅವರು ಅದೇ ಕಾಲೇಜಿನಲ್ಲಿ ಹಿಂದೆ ವಿ.ಕೆ. ಮೂರ್ತಿ ಅವರ ಸಹಪಾಠಿಗಳಾಗಿದ್ದರು. 1943ರಲ್ಲಿ ಅವರೆಲ್ಲ ಅಲ್ಲಿ ಮೊದಲ ಬ್ಯಾಚ್‌ನ ವಿದ್ಯಾರ್ಥಿಗಳಾಗಿದ್ದವರು.



ನಾನು ಪಾಸಾದೆ. ನಮ್ಮ ಸಹಪಾಠಿಗಳಲ್ಲಿ ಜ್ಯೂಪಿಟರ್ ಫಿಲ್ಮ್ಸ್ ಮಾಲೀಕರ ಮಗನೂ ಇದ್ದ. ಅವನ ಹೆಸರು ಸೆಂಥಿಲ್ ಕುಮಾರ್. ಸಿ. ವಸಂತಕುಮಾರ್ ಹಾಗೂ ಒಡಿಶಾದ ಭೂಪತಿ ಎಂಬುವವರು ನನ್ನ ಸಹಪಾಠಿಗಳಾಗಿದ್ದರು. ಅವರೆಲ್ಲ ಮುಂದೆ ತಮ್ಮದೇ ಪಥದಲ್ಲಿ ಸಾಗಿ ಹೆಸರು ಮಾಡಿದರು. ಸಿನಿಮಾಟೊಗ್ರಫರ್ ಗೌರಿಶಂಕರ್, ವನ್ಯಜೀವಿ ಛಾಯಾಚಿತ್ರದಲ್ಲಿ ಹೆಸರು